ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ, ಮೈಸೂರು.**

ಎನ್.ಪಿ.ಸಿ. ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10. ದೂರವಾಣಿ ಸಂಖ್ಯೆ: 0821-2449670 E-mail Id: dmo.mys@gmail.com

---

ಸಂಖ್ಯೆ : ಡಿ.ವಿ.ಬಿ.ಡಿ.ಸಿ.ಒ./ಮೈ/ಅಮೇ/01/2025-26 ದಿನಾಂಕ: 24-06-2025

ಗೆ,

ಉಪ ನಿರ್ದೇಶಕರು
ವಾರ್ತಾ ಮತ್ತು ಪ್ರಸಾರ ಇಲಾಖೆ,
ಮೈಸೂರು.

ಮಾನ್ಯರೆ,

ವಿಷಯ:- ನೇರ ಸಂದರ್ಶನದ ಮೂಲಕ ಕೀಟ ಸಂಗ್ರಕಾರರ (Insect collector) ಹುದ್ದೆಗೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಿಸುವ ಕುರಿತು.

******

ವಿಷಯಕ್ಕೆ ಸಂಬಂಧಿಸಿದಂತೆ ಕೆಳಗಿನ ಮಾಹಿತಿಯನ್ನು ಎರಡು ಪ್ರಾದೇಶಿಕ ಕನ್ನಡ ಭಾಷೆಯ ಸುದ್ದಿ ಪತ್ರಿಕೆಯಲ್ಲಿ (Regional News paper) ಮತ್ತು ಒಂದು ಆಂಗ್ಲ ಭಾಷೆಯ ಸುದ್ದಿ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸಲು ತಮ್ಮಲ್ಲಿ ಕೋರಲಾಗಿದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಛೇರಿ ನಜರಬಾದ್.ಮೈಸೂರು.570010

**ಪ್ರಕಟಣೆ**

NHM(NVBDCP) ಕಾರ್ಯ ಕ್ರಮದಡಿಯಲ್ಲಿ ಡಿವಿಬಿಡಿಸಿಒ,ಕಛೇರಿ, ಮೈಸೂರು,ಇಲ್ಲಿಗೆ 2025-26ನೇ ಸಾಲಿಗೆ ಕೀಟ ಸಂಗ್ರಹಕಾರರು (Insect collector) **ಒಂದು ಹುದ್ದೆಗೆ** ಗುತ್ತಿಗೆ ಆಧಾರದಲ್ಲಿ ನೇರ ನೇಮಕಾತಿಗೆ ದಿನಾಂಕ: 07-07-2025 ರಂದು ಸಮಯ: 10.30 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರ ಕಛೇರಿ ನಜರಬಾದ್.ಮೈಸೂರು ಇಲ್ಲಿ ನೇರ ಸಂದರ್ಶನವನ್ನು (walk-in-interview)ನಡೆಸಲಾಗುವುದು.ಆಸಕ್ತರು ದ್ವಿತೀಯ ಪಿಯುಸಿ/12ನೇ ತರಗತಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾಗಿದ್ದು, 40 ವರ್ಷ ವಯೋಮಿತಿಯೊಳಗಿರಬೇಕು. ಮಾಸಿಕ ಗೌರವ ಧನ ರೂ.16575.00+ಪ್ರಯಾಣಭತ್ಯ+ದಿನಭತ್ಯ.

ಮಾಹಿತಿಗಾಗಿ ಸಂಪರ್ಕಿಸಿ:Website address: https://mysore.nic.in/en/

ಸದಸ್ಯ ಕಾರ್ಯದರ್ಶಿ/ನೇಮಕಾತಿ ಸಮಿತಿ
ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಛೇರಿ
ನಜರಬಾದ್.ಮೈಸೂರು.570010

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ, ಮೈಸೂರು.**

ಎನ್.ಪಿ.ಸಿ. ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10. ದೂರವಾಣಿ ಸಂಖ್ಯೆ: 0821-2449670 E-mail Id: dmo.mys@gmail.com

ಸಂಖ್ಯೆ : ಡಿ.ವಿ.ಬಿ.ಡಿ.ಸಿ.ಒ./ಮೈ/ಅಮೇ/01/2025-26 ದಿನಾಂಕ: 24-06-2025

ಗೆ,

ಜಿಲ್ಲಾ ಮಾಹಿತಿ ಸಂಗ್ರಹಣಾಧಿಕಾರಿ

ಎನ್.ಐ.ಸಿ. ಜಿಲ್ಲಾ ಪಂಚಾಯತ್

ಮೈಸೂರು.

ಮಾನ್ಯರೆ,

ವಿಷಯ:- ನೇರ ಸಂದರ್ಶನದ ಮೂಲಕ ರಾಷ್ಟ್ರಿಯ ಆರೋಗ್ಯ ಅಭಿಯಾನದಡಿಯಲ್ಲಿ (ಎನ್.ಹೆಚ್.ಎಂ) ಕೀಟ ಸಂಗ್ರಹಕಾರರನ್ನು 2025-26ನೇ ಸಾಲಿಗೆ ಒಂದು ವರ್ಷ ಗುತ್ತಿಗೆ ಆಧಾರದ ಮೇಲೆ ಒಂದು ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಪ್ರಕಟಣೆಯ ಬಗ್ಗೆ.

******

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಛೇರಿ ನಜರಬಾದ್ ಮೈಸೂರು. ಇಲ್ಲಿಗೆ ಮಲೇರಿಯಾ, ಫೈಲೇರಿಯಾ, ಡೆಂಗ್ಯೂ, ಚಿಕನ್‌ಗುನ್ಯ ರೋಗಗಳಿಗೆ ಸಂಬಂಧಿಸಿದ ರೋಗವಾಹಕಗಳ (ಕೀಟಗಳನ್ನು) ಸಂಗ್ರಹಿಸಲು ಅಗತ್ಯವಿರುವ ಕೀಟ ಸಂಗ್ರಾಹಕ ಹುದ್ದೆಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಮಾರ್ಗಸೂಚಿಗಳನ್ವಯ ಒಂದು ಕೀಟ ಸಂಗ್ರಹಕಾರರನ್ನು 2025-26ನೇ ಸಾಲಿಗೆ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ನೇರ ಸಂದರ್ಶನ (walk-in-interview) ನಡೆಸಲಾಗುವುದು.

<u>ಅಭ್ಯರ್ಥಿಗಳ ಅರ್ಹತೆಗಳು ಈ ಕೆಳಕಂಡಂತೆ ಇರುತ್ತದೆ</u>

| ಕ್ರಮ ಸಂಖ್ಯೆ | ಹುದ್ದೆಯ ವಿವರ | ಹುದ್ದೆಯ ವಿವರ | ವಿದ್ಯಾಭ್ಯಾಸ | ವಯೋಮಿತಿ | ಮಾಸಿಕ ಸಂಚಿತ ವೇತನ |
|---|---|---|---|---|---|
| 1 | ಕೀಟ ಸಂಗ್ರಹಕಾರ (Insect collector) | 01 (ಒಂದು) | ದ್ವಿತೀಯ ಪಿಯುಸಿ/12ನೇ ತರಗತಿ, ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾಗಿರಬೇಕು | ವಯೋಮಿತಿ 18 ವರ್ಷ ಮೇಲ್ಪಟ್ಟು ಮತ್ತು 40 ವರ್ಷದೊಳಗೆ (ನೇರ ಸಂದರ್ಶನ ದಿನಾಂಕದಂದು ಇರಬೇಕು) | 16575/- |

<u>ಷರತ್ತು ಮತ್ತು ನಿಬಂಧನೆಗಳು:</u>

1. ಅಭ್ಯರ್ಥಿಯು ಗಣಕಯಂತ್ರ ನಿರ್ವಹಣೆ ಜ್ಞಾನ ಹೊಂದಿರಬೇಕು.
2. ನಗರ/ಗ್ರಾಮೀಣ ಪ್ರದೇಶಗಳಲ್ಲಿ ಸೊಳ್ಳೆ/ಕೀಟಗಳ ಸಂಗ್ರಹಣೆಗಾಗಿ ಮುಂಜಾನೆ 5:00 ಗಂಟೆಗೆ ಹಾಗೂ ರಾತ್ರಿ 8:00 ರ ಸಮಯದಲ್ಲಿ ಕಾರ್ಯ ನಿರ್ವಹಿಸುವುದು. ಸಂದರ್ಭಕ್ಕೆ ಅನುಸಾರವಾಗಿ ವ್ಯಾಸ್ತವ್ಯವಿರಬೇಕು.
3. ತಿಂಗಳಲ್ಲಿ ಕನಿಷ್ಠ 16 ದಿನ ಪ್ರವಾಸ ಮಾಡುವುದು ಕಡ್ಡಾಯವಾಗಿರುತ್ತದೆ ಹೆಚ್ಚಿನ ವಿವರಗಳನ್ನು ಕಛೇರಿಯಲ್ಲಿ ಪಡೆಯಬಹುದಾಗಿದೆ.
4. ಸದರಿ ಹುದ್ದೆಯು ಗುತ್ತಿಗೆ ಅವಧಿಗೆ ಸೀಮಿತವಾಗಿದ್ದು, ಖಾಯಂ ಹುದ್ದೆ ಎಂದು ಪರಿಗಣಿಸುವುದಿಲ್ಲ.

<u>ನೇರ ನೇಮಕಾತಿ ಸಂದರ್ಶನ ನಡೆಯುವ ಸ್ಥಳ</u>: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ನಾಗಮ್ಮ ಆಸ್ಪತ್ರೆ ಆವರಣ,ನಜರಬಾದ್, ಮೈಸೂರು ಜಿಲ್ಲೆ, ಮೈಸೂರು-570010.

ದಿನಾಂಕ: 07-07-2025 ರಂದು <u>ಸಮಯ: ಬೆಳ್ಳಿಗೆ 10.30 ರಿಂದ</u>

ವಂದನೆಗಳೊಂದಿಗೆ,

ತಮ್ಮ ನಂಬುಗೆಯ

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು
ಮೈಸೂರು, ಜಿಲ್ಲೆ, ಮೈಸೂರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
ಮೈಸೂರು, ಜಿಲ್ಲೆ, ಮೈಸೂರು